19	ಬೀದರ್	89.45
20	ರಾಯಚೂರು	132.50
21	ದಾವಣಗೆರೆ	207.00
22	ರಾಮನಗರ	17.85
23	ಚಿಕ್ಕಬಳ್ಳಾಪುರ	98.45
24	ಚಾಮರಾಜನಗರ	70.10
25	ಉಡುಪಿ	59.50
26	ಬಾಗಲಕೋಟೆ	71.00
27	ಗದಗ್	90.47
28	ಹಾವೇರಿ	111.60
29	ಕೊಪ್ಪಳ	81.00
	ಒಟ್ಟು	**3069.52**

ಚಿತ್ರದುರ್ಗ ಜಿಲ್ಲೆಗೆ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟೆಲ್‌ಗಳು

116 ಶ್ರೀ ತಿಪ್ಪೇಸ್ವಾಮಿ
ಡಿ. ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) ಪ್ರಸಕ್ತ ವರ್ಷದಲ್ಲಿ ಚಿತ್ರದುರ್ಗ ಜಿಲ್ಲೆಗೆ ಮಂಜೂರಾದ ಕಿತ್ತೂರು ರಾಣಿ ಚೆನ್ನಮ್ಮ ಹಾಸ್ಟಲ್‌ಗಳು ಎಷ್ಟು; ಇದಕ್ಕಾಗಿ ಬಿಡುಗಡೆಯಾದ ಅನುದಾನ ಎಷ್ಟು;

ಆ) ಈ ಅನುದಾನದಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಮಂಜೂರು ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ಪ್ರಸಕ್ತ ವರ್ಷದಲ್ಲಿ ಚಿತ್ರದುರ್ಗ ಜಿಲ್ಲೆಗೆ ಈ ಕೆಳಕಂಡಂತೆ ಹೆಣ್ಣುಮಕ್ಕಳ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಕ್ರ. ಸಂ	ತಾಲ್ಲೂಕು ಹೆಸರು	ಮಂಜೂರಾತಿ ಸಂಖ್ಯೆ		ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
		ಪ.ಜಾತಿ	ಪ.ವರ್ಗ	
1	ಹೊಸದುರ್ಗ	1	–	22.18
2	ಹಿರಿಯೂರು	1	–	22.18
3	ಹೊಳಲ್ಕೆರೆ	1	–	22.18

4	ಮೊಳಕಾಲ್ಮೂರು	0	1	22.18
5	ಚಳ್ಳಕೆರೆ	0	1	22.18
	ಒಟ್ಟು	**3**	**2**	**110.90**

ಇ) ಮಂಜೂರಾತಿಗೆ ಅನುಸರಿಸಿದ ಮಾನದಂಡಗಳೇನು;ಮಾನದಂಡದಂತೆಯೇ ಅನುದಾನವನ್ನು ಮಂಜೂರು ಮಾಡಲಾಗಿದೆಯೇ

ಈ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಡಾ: ನಂಜುಂಡಪ್ಪ ವರದಿಯಂತೆ ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಈ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ವಸತಿ ಶಾಲೆಗಳ ನಿರ್ವಹಣಾ ವೆಚ್ಚ ಭರಿಸಲು ಮೇಲಿದ್ದಂತೆ ಅನುದಾನ ನೀಡಲಾಗುವುದು.

ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇಕಡ 18ರ ಅನುದಾನದ ಮೀಸಲಾತಿ

118 ಶ್ರೀ.ತಿಪ್ಪೇಸ್ವಾಮಿ
ಡಿ. ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) 2008–09ನೇ ಸಾಲಿನ ಬಜೆಟ್‌ನಲ್ಲಿ ಶೇಕಡ 18ರ ಮೀಸಲಾತಿ ಅಡಿಯಲ್ಲಿ ವಿವಿಧ ಯೋಜನೆಗಳಿಗಾಗಿ ಸರ್ಕಾರ ಬಿಡುಗಡೆ ಮಾಡಿದ/ ಮೀಸಲಿಟ್ಟ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)

ಆ) ಬಿಡುಗಡೆಯಾದ ಅನುದಾನದಲ್ಲಿ ಖರ್ಚಾದ ಹಣವೆಷ್ಟು ಯೋಜನೆವಾರು ವಿವರ ನೀಡುವುದು;

ಇ) ಖರ್ಚಾಗೆ ಹಾಗೆ ಉಳಿದ ಅನುದಾನವೆಷ್ಟು; ಯೋಜನೆ ವಾರು ವಿವರ ನೀಡುವುದು;

2008–09ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ.323243.77 ಲಕ್ಷಗಳನ್ನು ಹಾಗೂ ಗಿರಿಜನ ಉಪಯೋಜನೆಯಡಿ 126389.08 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ಅನುಕ್ರಮವಾಗಿ ರೂ.257568.21 ಲಕ್ಷಗಳು ಮತ್ತು ರೂ.98876.10 ಲಕ್ಷಗಳ ವೆಚ್ಚ ಉಂಟಾಗಿರುತ್ತದೆ. ಆ ಸಂಬಂಧದ ಇಲಾಖಾವಾರು ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ

ಈ) ಹಾಗಿದ್ದಲ್ಲಿ, ಅನುದಾನವು ಖರ್ಚಾಗದೆ ಉಳಿದುಕೊಳ್ಳಲು ಕಾರಣವೇನು; ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಅವರ ಮೇಲೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ; ಸಂಪೂರ್ಣ ವಿವರ ನೀಡುವುದು?